ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹರಿಹರ

ಸಿಸಿ 617/2021

| | | |
|---|---|---|
| ಪಿರ್ಯಾದುದಾರರು | | ಆರೋಪಿತರು |
| ಕರ್ನಾಟಕ ಸರ್ಕಾರದ ಪರವಾಗಿ<br>ಗ್ರಾಮಾಂತರ ಪೋ.ಠಾಣೆ, ಹರಿಹರ | ವಿರುದ್ದ | ಹೊನ್ನುರ್ ಸಾಬ್ ಹಾಗೂ ಇನ್ನಿಬ್ಬರು |

ದೋಷಾರೋಪಣೆ

ಶ್ರೀ ಮಹಾದೇವ ಕಾನಟ್ಟಿ, ಬಿ.ಕಾಂ., ಎಲ್.ಎಲ್,ಬಿ.Spl, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾ ಯಾಲಯ , ಹರಿಹರ ಆದ ನಾನು ನಿಮ್ಮನ್ನು ಅಂದರೆಃ

ಎ.1 ಹೊನ್ನುರ್ ಸಾಬ್ ತಂದೆ ಮಹಮ್ಮದ್ ಸಾಬ್, 33 ವರ್ಷ,

ಎ.2 ಸುಬಾನ್ ಸಾಬ್ ತಂದೆ ಹೊನ್ನೂರ್ ಸಾಬ್, 23 ವರ್ಷ,

ಎ.3 ಸಂತೋಷ ತಂದೆ ರಾಜಪ್ಪ, 26 ವರ್ಷ,

ಎಲ್ಲರ ವಾಸಃ ಕಕ್ಕರಗೊಳ್ಳ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ ಃ

ಆರೋಪಿತರಾದ ನೀವು ಕಳ್ಳತನ ಮಾಡುವ ಸಮಾನ ಉದ್ದೇಶದಿಂದ ದಿನಾಂಕಃ 21.01.2020 ರಂದು ರಾತ್ರಿ ಸಮಯದಲ್ಲಿ ಹರಿಹರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ದೊಗ್ಗಳ್ಳಿ ಗ್ರಾಮದಲ್ಲಿ ಚಾಸಾ.1 ರವರು ವಾಸವಾಗಿರುವ ಬೀಗ ಹಾಕಿದ ಮನೆಯ ಮುಂದಿನ ಬೀಗ ಮುರಿದು ಸದರಿ ಮನೆಯೊಳಗೆ ಅಕ್ರಮ ಪ್ರವೇಶ ಮಾಡಿರುತ್ತೀರಾ. ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.457 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀಯಾ.

ಮುಂದುವರೆದು ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವು ಕಳ್ಳತನ ಮಾಡುವ ಸಮಾನ ಉದ್ದೇಶದಿಂದ ಮೇಲ್ಕಂಡ ಮನೆಯ ಅಡುಗೆ ಕೋಣೆಯಲ್ಲಿದ್ದ ಗಾಡ್ರೇಜ್ ಬೀರುವಿನ ಬಾಗಿಲನ್ನು ಯಾವುದೋ ರಾಡಿನಿಂದ ಮೀಟಿ ತೆರೆದು ಬೀರುವಿನ ಇಂಟರ್ ಲಾಕರ್ ನಲ್ಲಿದ್ದ ರೂ.15,700/ ಬೆಲೆ ಬಾಳುವ ಬಂಗಾರದ ಒಡವೆಗಳನ್ನು ಮತ್ತು ರೂ.200/ ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತೀರಾ. ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.380 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಾ.

ಆರೋಪಿತರಾದ ನೀವು ಮೇಲ್ಕಂಡ ಅಪರಾಧಗಳಿಗೆ ಇದೇ ನ್ಯಾಯಾಲಯದಲ್ಲಿ ನನ್ನ ಮುಂದೆ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

Sd/-

ದಿನಾಂಕಃ 11.07.2023

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆಎಂಎಫ್ ಸಿ, ಹರಿಹರ